ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ನರಸೀಪುರ ತಾಲ್ಲೂಕಿನ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಕುರಿತು ಎಂದು ಲೋಕೋಪಯೋಗಿ ಇಲಾಖೆಗೆ ಈ ಪ್ರಶ್ನೆಯನ್ನು ಕೇಳಲಾಗಿದೆ. ಗ್ರಾಮೀಣಾಭಿವೃದ್ಧಿ ಇಲಾಖೆಯ ಮಂತ್ರಿಗಳು ಯಾವ್ಯಾವ ದಿವಸ ಉತ್ತರ ಕೊಡಬೇಕೆಂಬ ಲಿಸ್ಟ್ ಇದೆ. ಈ ಪ್ರಶ್ನೆ ಅಲ್ಲಿಗೆ ವರ್ಗಾವಣೆಯಾಗಿರುವುದರಿಂದ ಮುಂದೆ ಬರತಕ್ಕಂಥ ದಿವಸ ಇದಕ್ಕೆ ಉತ್ತರ ಕೊಡುತ್ತೇವೆ. ಅಕಸ್ಮಾತ್ ಇದು ತಪ್ಪಾಗಿರಬಹುದು. ಆದರೆ, ಯಾರು ಹೇಳುವವರು ಮತ್ತು ಕೇಳುವವರು ಇಲ್ಲವೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಇದು ಸರಿಯಲ್ಲ. ಇದಕ್ಕೆ ಉತ್ತರ ಕೊಡುವುದಕ್ಕೆ ಸರ್ಕಾರ ಇದೆ.

ಶ್ರೀ ವಾಟಾಳ್ ನಾಗರಾಜ್ : ಖಂಡಿತ ಸರ್ಕಾರ ಇಲ್ಲಿ ಇಲ್ಲ.

(ಗೊಂದಲ)

ಅಧ್ಯಕ್ಷರು : ಇಲ್ಲಿಯವರೆಗೆ ಕೇವಲ ನಾಲ್ಕು ಪ್ರಶ್ನೆಗಳು ಮಾತ್ರ ಮುಗಿದಿವೆ. ಇನ್ನೂ 10 ಪ್ರಶ್ನೆಗಳನ್ನು ಕೇಳಬೇಕಾಗಿದೆ. ಈಗಾಗಲೇ ಒಂದು ಗಂಟೆ ಮುಗಿದುಹೋಗಿದೆ. ಪ್ರಶ್ನೋತ್ತರ ವೇಳೆ ಈಗಾಗಲೇ ಮುಗಿದಿದೆ. ಆದರೆ, ನಾಲ್ಕು ಪ್ರಶ್ನೆಗಳು ಮಾತ್ರ ಮುಗಿದಿದೆ. ಆದ್ದರಿಂದ ಪ್ರಶ್ನೋತ್ತರ ವೇಳೆನಡೆಸುವುದಕ್ಕೆ ದಯಮಾಡಿ ಎಲ್ಲರೂ ಸಹಕರಿಸಿ. ಹೊಸ ಹೊಸ ಸದಸ್ಯರು ಅನೇಕ ಪ್ರಶ್ನೆಯನ್ನು ಕೇಳಬೇಕೆಂದು ಕಾಯುತ್ತಿದ್ದಾರೆ. ಆದ್ದರಿಂದ ದಯಮಾಡಿ ಸಹಕರಿಸಿ.

ಶ್ರೀ ಜಗದೀಶ್ ಶೆಟ್ಟರ್ : ಮೂರು ತಿಂಗಳಿಂದ ಈ ಒಂದು ಇಲಾಖೆಗೆ ಸಚಿವರನ್ನು ನೇಮಕ ಮಾಡಿಲ್ಲ. ಮತ್ತೆ ಈಗ ಸರ್ಕಾರ ಇಲ್ಲದಂಥ ಪರಿಸ್ಥಿತಿ ನಿರ್ಮಾಣವಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ : ಹಾಗಾದರೆ, ವಿರೋಧಪಕ್ಷವು ಇಲ್ಲಿ ಇಲ್ಲವೆಂದು ನಾವು ಹೇಳುತ್ತೇವೆ.

ಅಧ್ಯಕ್ಷರು : ದಯಮಾಡಿ ಎಲ್ಲರೂ ಸಹಕರಿಸಿ.

ಶ್ರೀ ವಾಟಾಳ್‌ನಾಗರಾಜ್ : ಸರ್ಕಾರ ಇದೆ ಎನ್ನುವುದಾದರೆ ಮಂತ್ರಿಮಂಡಲವನ್ನು ಬೇಗ ರಚನೆ ಮಾಡಬೇಕು.

ಅಧ್ಯಕ್ಷರು : ಅದರ ಬಗ್ಗೆ ಈಗ ಚರ್ಚೆ ಬೇಡ. ದಯಮಾಡಿ ಎಲ್ಲರೂ ಸಹಕರಿಸಿ.

ವಿಧಾನ ಸೌಧದ ಬಳಿ ನಿರ್ಮಾಣವಾಗುತ್ತಿರುವ ವಿಕಾಸ ಸೌಧದ ಕಾಮಗಾರಿ ಪ್ರಗತಿ

36 (107): ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಧಾನ ಸೌಧದ ಬಳಿ ವಿಕಾಸ ಸೌಧದ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಯಿತು;

ಆ) ಇದರ ಅಂದಾಜು ವೆಚ್ಚವೆಷ್ಟು; ಹಾಗೂ ಇದುವರೆಗೆ ಖರ್ಚು ಮಾಡಿದ ಹಣವೆಷ್ಟು; ಈ ಕಾಮಗಾರಿಗಳು ಯಾವಾಗ ಪೂರ್ಣಗೊಳ್ಳಬೇಕಾಗಿತ್ತು;

ಇ) ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಬೇಕಾಗುವ ಹಣವೆಷ್ಟು;

ಈ) ಈ ವಿಕಾಸ ಸೌಧದಲ್ಲಿರುವ ಒಟ್ಟು ಕೊಠಡಿಗಳ ಸಂಖ್ಯೆ ಎಷ್ಟು;

ಉ) ಇಲ್ಲಿಗೆ ಯಾವ ಯಾವ ಕಛೇರಿಗಳನ್ನ ಸ್ಥಳಾಂತರಿಸಲಾಗುವುದು;

ಊ) ಈ ಕಟ್ಟಡದ ಸೌಂದರ್ಯವನ್ನು ಕಾಪಾಡಲು ಯಾವ ಹಾವ ಹಾಲಿ ಕಟ್ಟಡಗಳನ್ನು ಕೆಡವಲಾಗುವುದು;

ಋ) ಈ ವಿಕಾಸ ಸೌಧ ಯಾವಾಗ ಪೂರ್ಣಗೊಳ್ಳುತ್ತದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಸಚಿವರು)

ಅ) ವಿಕಾಸ ಸೌಧದ ಕಾಮಗಾರಿಯನ್ನು ದಿನಾಂಕ: 1.9.2001ರಂದು ಪ್ರಾರಂಭಿಸಲಾಯಿತು

ಆ) ಈ ಕಾಮಗಾರಿಯ ಅಂದಾಜು ವೆಚ್ಚ ರೂ. 100.00 ಕೋಟಿಗಳು. ಇಲ್ಲಿಯವರೆಗೆ ಒಟ್ಟು 88.36 ಕೋಟಿಗಳನ್ನು ಖರ್ಚು ಮಾಡಲಾಗಿದೆ. ಈ ಕಾಮಗಾರಿಯು ಕರಾರಿನಂತೆ ದಿನಾಂಕ: 31.8.2004 ರೊಳಗೆ ಪೂರ್ಣಗೊಳ್ಳಬೇಕಾಗಿದೆ.

ಇ) ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಒಟ್ಟು ರೂ. 125.00 ಕೋಟಿಗಳು ಬೇಕಾಗುತ್ತದೆ.

ಈ) ವಿಕಾಸ ಸೌಧದಲ್ಲಿ ಒಟ್ಟು 118 ಕೊಠಡಿಗಳಿವೆ.

ಉ) ಈ ಕೆಳಕಂಡ ಇಲಾಖೆಗಳ ಸಂಬಂಧಪಟ್ಟ ಕಛೇರಿಗಳು ಸ್ಥಳಾಂತರಗೊಳ್ಳುವುವು.

1. ಕಾನೂನು ಇಲಾಖೆ
2. ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ
3. ಮೂಲಭೂತ ಸೌಲಭ್ಯ ಅಭಿವೃದ್ಧಿ ಇಲಾಖೆ
4. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
5. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
6. ಸಹಕಾರ ಇಲಾಖೆ
7. ಸಮಾಜ ಕಲ್ಯಾಣ ಇಲಾಖೆ
8. ಇಂಧನ ಇಲಾಖೆ
9. ವಸತಿ ಇಲಾಖೆ
10. ಜಲ ಸಂಪನ್ಮೂಲ ಇಲಾಖೆ
11. ಲೋಕೋಪಯೋಗಿ ಇಲಾಖೆ
12. ನಗರಾಭಿವೃದ್ಧಿ ಇಲಾಖೆ
13. ಕನ್ನಡ ಮತ್ತು ಸಂಸ್ಕೃತಿ ಇಲಾಖೆ
14. ಕಾರ್ಮಿಕ ಇಲಾಖೆ

ಊ) ವಿಕಾಸ ಸೌಧದ ಸುತ್ತುಮುತ್ತಲೂ ರಸ್ತೆ ಹಾಗೂ ಉದ್ಯಾನವನವನ್ನು ನಿರ್ಮಿಸುವುದಕ್ಕಾಗಿ ಬಹುಮಹಡಿ ಕಟ್ಟಡಗಳ ಆವರಣದಲ್ಲಿರುವ ಸರ್ಕಾರಿ ಮುದ್ರಣಾಲಯ (ಮಹಾಲೇಕಪಾಲರ ಕಛೇರಿ ಎದುರು ಇರುವ ಕಟ್ಟಡ) ಕಟ್ಟಡವನ್ನು ಕೆಡವಲು ಕ್ರಮ ಕೈಗೊಳ್ಳಲಾಗಿದೆ.

ಋ) ವಿಕಾಸ ಸೌಧ ಕಟ್ಟಡದ ಮೂಲ ಟೆಂಡರ್‌ನ ಕಾಮಗಾರಿಗಳು ಟೆಂಡರ್ 9 ಕರಾರಿನಂತೆ ದಿನಾಂಕ: 31.8.2004 ರೊಳಗೆ ಪೂರ್ಣಗೊಳ್ಳುತ್ತದೆ. ಇತರೆ ಕಾಮಗಾರಿಗಳು ಪೂರ್ಣಗೊಳ್ಳುವ ವಿವಿಧ ಹಂತಗಳಲ್ಲಿವೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, ವಿಕಾಸ ಸೌಧದ ನಿರ್ಮಾಣದ ಮುಖ್ಯ ಉದ್ದೇಶ ಏನಿತ್ತು? ಇದರ ಕಾಮಗಾರಿ ವೆಚ್ಚ 100 ಕೋಟಿ ರೂಪಾಯಿ ಎಂದು ಹೇಳಿ ಪ್ರಾರಂಭ ಮಾಡಿ ಈಗ ಈ ಕಾಮಗಾರಿ ಪೂರ್ಣವಾಗುವುದಕ್ಕೆ 125 ಕೋಟಿ ರೂಪಾಯಿ ಆಗುತ್ತದೆ ಎಂದು ಹೇಳಿದ್ದಾರೆ. ಏತಕ್ಕೋಸ್ಕರ 25 ಕೋಟಿ ರೂಪಾಯಿ ಹೆಚ್ಚಾಯಿತು ಮತ್ತು ಇದಕ್ಕೆ ಮೊದಲು ಅಂದಾಜು ಮಾಡಿರಲಿಲ್ಲವೆ? ಮತ್ತು ಉಳಿಕೆ ಕಾಮಗಾರಿಗಳು ಪೂರ್ಣಗೊಳ್ಳುವ ವಿವಿಧ ಹಂತಗಳಲ್ಲಿವೆ ಎಂದು ಹೇಳಿದ್ದಾರೆ. ಆದ್ದರಿಂದ ಉಳಿಕೆಯಾಗಿರತಕ್ಕಂಥ ಕಾಮಗಾರಿಯನ್ನು ಯಾವಾಗ ಪೂರ್ಣ ಮಾಡುತ್ತೀರಿ? ಮತ್ತೆ ಇದಕ್ಕೆ ಹೆಚ್ಚುವರಿಯಾಗಿ 50 ರಿಂದ 100 ಕೋಟಿ ರೂಪಾಯಿ ಬೇಕಾಗುತ್ತದೆಯೆ? ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳುತ್ತೇನೆ. ಈಗಾಗಲೇ ಒಂದು ಸಲ ಉದ್ಘಾಟನೆ ಮಾಡಲಾಗಿದೆ. ಮತ್ತೆ ಇನ್ನೊಂದು ಸಲ ಉದ್ಘಾಟನೆ ಮಾಡುತ್ತೀರಾ?

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಸದರಿ ಕಾಮಗಾರಿಯನ್ನು ಮೂಲ ಗುತ್ತಿಗೆದಾರರಿಗೆ 94 ಕೋಟಿ ರೂಪಾಯಿಗೆ ವಹಿಸಲಾಗಿತ್ತು. ಮತ್ತೆ ಜನರೇಟರ್‌ಗಾಗಿ ಬೇರೆ ಕಟ್ಟಡವನ್ನು ನಿರ್ಮಾಣ ಮಾಡುವುದಕ್ಕೋಸ್ಕರ 2.5 ಕೋಟಿ ರೂಪಾಯಿ ಮತ್ತು ಭದ್ರತಾ ಮೇಲ್ವಿಚಾರಣೆ ವ್ಯವಸ್ಥೆ ಕಾಮಗಾರಿಗೋಸ್ಕರ 1.85 ಕೋಟಿ ರೂ. ಮತ್ತು ಲಾನ್ ಸಂಪರ್ಕ ಸೌಲಭ್ಯಕ್ಕೆ 3.95 ಕೋಟಿ ರೂ ಹಾಗೂ ಮಳೆನೀರು ಹರಿದು ಹೋಗುವುದಕ್ಕೆ ನಿರ್ಮಾಣ ಮಾಡತಕ್ಕಂಥ ಮೋರಿಗೆ ಸುಮಾರು 60 ಲಕ್ಷ ರೂ ಮತ್ತು ರಸ್ತೆ ನಿರ್ಮಾಣಬಲಪಡಿಸುವುದಕ್ಕೋಸ್ಕರ ಸುಮಾರು 2 ಕೋಟಿ ರೂ ಒಳಾಂಗಣದ ವಿನ್ಯಾಸ ಮತ್ತು ಪೀಠೋಪಕರಣಗಳ ಕಾಮಗಾರಿಗೆ 15 ಕೋಟಿ ರೂ ಮತ್ತು ವಿದ್ಯುತ್ ಫೀಡರ್ ಲೈನ್ ಅಳವಡಿಸುವುದಕ್ಕೆ 1 ಕೋಟಿ 25 ಲಕ್ಷ ರೂಪಾಯಿ ಹಾಗೂ ನೀರು ಸರಬರಾಜು ಒಳ ಮತ್ತು ಒಳಚರಂಡಿ ಇಲಾಖೆಗೆ 2.95 ಕೋಟಿ ರೂ. ಈ ರೀತಿಯಾಗಿ ಒಟ್ಟು 25 ಕೋಟಿ ರೂಪಾಯಿಗಳನ್ನು ಪ್ರತ್ಯೇಕವಾಗಿ ನಿಗದಿ ಮಾಡಲಾಗಿದೆ. ಇದಕ್ಕೆಲ್ಲಾ ಟೆಂಡರ್ ಕರೆದು ಕಾನೂನು ರೀತಿಯಲ್ಲಿ ಯಾವ ರೀತಿ ಕೊಡಬೇಕೆಂಬುದರ ಬಗ್ಗೆ ವಿಮರ್ಶೆ ಮಾಡುತ್ತೇವೆ. ಮೊದಲು ಟೆಂಡರ್ ಮಾಡಿ 94.35 ಕೋಟಿ ರೂಪಾಯಿ ಈ ವಿಕಾಸ ಸೌಧದ ಕಾಮಗಾರಿಯನ್ನು ಎಂಟ್ರಸ್ಟ್ ಮಾಡಲಾಗಿತ್ತು.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, ಈ ಕಟ್ಟಡ ಸುತ್ತಮುತ್ತ ಇರತಕ್ಕ ರಸ್ತೆಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ಹೈ ಗ್ರೌಂಡ್ಸ್‌ನಿಂದ ಬೆಂಗಳೂರು ದಕ್ಷಿಣ ಭಾಗಕ್ಕೆ ಹೋಗತಕ್ಕಂಥ ರಸ್ತೆಯನ್ನು ಈಗಾಗಲೇ ಗೇಟ್ ಹಾಕಿ ಮುಚ್ಚಿದ್ದಾರೆ. ಇದರಿಂದ ಸಾರ್ವಜನಿಕರಿಗೆ ಬಹಳಷ್ಟು ತೊಂದರೆಯಾಗಿದೆ. ಸಾರ್ವಜನಿಕರು ಅತ್ತ ಕಡೆ ಹೋಗಬೇಕಾದರೆ ಸುತ್ತಿಕೊಂಡು ಹೋಗಬೇಕಾಗುತ್ತದೆ. ಮಾನ್ಯ ಶಿವಕುಮಾರ್‌ರವರಿಗೆ ಇದು ಗೊತ್ತಿದೆ. ಹೈಗ್ರೌಂಡ್ಸ್‌ನಿಂದ ಬರತಕ್ಕಂತ ರಸ್ತೆಯನ್ನು ತಾವು ಮತ್ತೆ ತೆರವು ಮಾಡಿ ಸಾರ್ವಜನಿಕರು ಹೋಗುವುದಕ್ಕೆ ದಾರಿ ಮಾಡಿಕೊಡುತ್ತೀರಾ ಅಥವಾ ಇಲ್ಲವಾ? ನನ್ನ ಎರಡನೇ ಪ್ರಶ್ನೆ ಏನೆಂದರೆ, ಇದು ಅಧಿಕಾರಿಗಳಿಗೋಸ್ಕರ ನಿರ್ಮಾಣ ಮಾಡಿರುವ ಸೌಧವೆ? ಹೊರಗಡೆ ಇರತಕ್ಕಂಥ ಸರ್ಕಾರಿ ಕಛೇರಿಗಳು ಖಾಸಗಿ ಬಿಲ್ಡಿಂಗ್‌ನಲ್ಲಿದ್ದು ಇದಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಬಾಡಿಗೆಗೋಸ್ಕರ ಕೊಡುತ್ತಿದ್ದೇವೆ. ಆದ್ದರಿಂದ ಈ ಎಲ್ಲಾ ಕಛೇರಿಗಳನ್ನು ವಿಕಾಸ ಸೌಧದ ಕಟ್ಟಡದಲ್ಲಿ ತರುವಂಥ ಉದ್ದೇಶದಿಂದ ಈ ಕಟ್ಟಡವನ್ನು ನಿರ್ಮಾಣ

ಮಾಡಲಾಗಿತ್ತು. ಆದರೆ, ಕಾರ್ಮಿಕ ಇಲಾಖೆಯಿಂದ ಕಾನೂನು ಇಲಾಖೆಯವರೆಗೆ ಅಂದರೆ, ಸುಮಾರು 14 ಇಲಾಖೆಗಳ ಕಛೇರಿಗೆ ಇದನ್ನು ಹಂಚುತ್ತೇವೆಂದು ಹೇಳಿದ್ದಾರೆ. ಇದನ್ನು ಕೇವಲ ಅಧಿಕಾರಿಗಳಿಗೋಸ್ಕರವೋ ಅಥವಾ ಅಧಿಕಾರಿಗಳ ಸೌಧವೋ ಅಥವಾ ಹೊರಗಡೆ ಬಾಡಿಗೆಯಲ್ಲಿರತಕ್ಕಂಥ ಕಛೇರಿ ಕಟ್ಟಡಕೋಸ್ಕರ ಕೊಡುತ್ತಿರುವ ಹಣವನನು ಕಡಿಮೆ ಮಾಡಿ ಈಗಾಗಲೇ 125 ಕೋಟಿ ರೂಪಾಯಿ ವಿಕಾಸಸೌಧಕ್ಕೆ ಖರ್ಚು ಮಾಡುತ್ತಿದ್ದು, ಇದರಿಂದಾಗಿ ಸರ್ಕಾರದ ಹೊರೆಯನ್ನು ಕಡಿಮೆ ಮಾಡುವುದಕ್ಕೋಸ್ಕರ ಹೊರಗಡೆ ಇರತಕ್ಕಂಥ ಸರ್ಕಾರಿ ಕಛೇರಿಗಳನ್ನು ಇಲ್ಲಿಗೆ ವರ್ಗಾವಣೆ ಮಾಡುತ್ತೀರಾ? ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಮಂತ್ರಿಗಳು ವಿವರವಾದ ಉತ್ತರವನ್ನು ಕೊಡಬೇಕು.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಈ ಕಟ್ಟಡಕ್ಕ ಯಾವ್ಯಾವ ಇಲಾಖೆಗಳನ್ನು ಅಂದರೆ ಈಗಾಗಲೇ ಉತ್ತರದಲ್ಲಿ ತಿಳಿಸಿರುವಂಥ 14 ಇಲಾಖೆಗಳನ್ನು ಇಲ್ಲಿಗೆ ವರ್ಗಾವಣೆ ಮ್ಮಾಡುವುದರ ಬಗ್ಗೆ ಮುಖ್ಯ ಕಾರ್ಯದರ್ಶಿಯವರ ಜೊತೆಗೆ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಈಗ 125 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಖರ್ಚು ಮಾಡುತ್ತಿದ್ದೀರಿ.

ಶ್ರೀ ಹೆಚ್.ಡಿ. ರೇವಣ್ಣ : ಇದಕ್ಕೆ ಸಂಬಂಧಪಟ್ಟಂತೆ ಬೇರೆ ಪ್ರಶ್ನೆ ಕೇಳಿದರೆ ನಾನು ಉತ್ತರ ಒದಗಿಸುತ್ತೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಇದೂ ಸಹ ಮೂಲ ಪ್ರಶ್ನೆಗೆ ಸಂಬಂಧಪಟ್ಟಿದೆ.

ಅಧ್ಯಕ್ಷರು : ಮಂತ್ರಿಗಳು ಉತ್ತರ ಕೊಡುವುದಕ್ಕೆ ಎದ್ದು ನಿಂತುಕೊಂಡಿದ್ದಾರೆ. ಆದರೆ ಈ ರೀತ ಮಧ್ಯೆ ಎದ್ದು ನಿಂತುಕೊಂಡರೆ ಹೇಗೆ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಹೊರಗಡೆ ಬಾಡಿಗೆಯಲ್ಲಿರತಕ್ಕಂಥ ಎಷ್ಟು ಕಛೇರಿಗಳು ಇಲ್ಲಿಗೆ ಬರುತ್ತಿವೆ ಎನ್ನತಕ್ಕಂಥ ಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ. ಈ ಕಟ್ಟಡವನ್ನು ಇಲ್ಲಿರತಕ್ಕಂಥವರು ಹಂಚಿಕೊಳ್ಳತಕ್ಕಂಥದಲ್ಲ.

ಅಧ್ಯಕ್ಷರು : ವಿವರ ಇದ್ದರೆ ಈಗಾಗಲೇ ಹೇಳಿ. ಇಲ್ಲದಿದ್ದರೆ ಅನಂತರ ಒದಗಿಸಿ ಕೊಡುತ್ತೇನೆಂದು ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮೂಲ ಪ್ರಶ್ನೆಯಲ್ಲಿ ಮಾನ್ಯ ಸದಸ್ಯರು ಈಗ ಕೇಳಿರತಕ್ಕಂಥ ಪ್ರಶ್ನೆ ಇಲ್ಲ. ಮತ್ತೆ ಅವರು ಬೇರೆ ಪ್ರಶ್ನೆಯನ್ನು ಕಳುಹಿಸಿಕೊಟ್ಟರೆ ಅದಕ್ಕೆ ಉತ್ತರವನ್ನು ಒದಗಿಸಿಕೊಡುತ್ತೇನೆ.

ಶ್ರೀ ಆರ್. ಅಶೋಕ್ : ವಿಕಾಸ ಸೌಧದ ಕಾಮಗಾರಿ ಪೂರ್ಣವಾಗಿ ಮುಗಿದಿದೆಯೋ ಅಥವಾ ಇಲ್ಲವೋ?

ಶ್ರೀ ಹೆಚ್.ಡಿ. ರೇವಣ್ಣ : ಈಗ ಕಾಮಗಾರಿ ಪೂರ್ಣವಾಗಿ ಮುಗಿದಿಲ್ಲ. ಇನ್ನು ಎರಡು ತಿಂಗಳಲ್ಲಿ ಎಲ್ಲಾ ಕಾಮಗಾರಿ ಮುಗಿಯುತ್ತದೆ.

ಶ್ರೀ ಆರ್. ಅಶೋಕ್ : ಹಾಗಾದರೆ ಕಾಮಗಾರಿಯನ್ನು ಮುಗಿಸಿ ಉದ್ಘಾಟನೆ ಯಾವಾಗ ಮಾಡಲಾಗುತ್ತದೆ ಎನ್ನತಕ್ಕಂಥದ್ದನ್ನು ಹೇಳಬೇಕು.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ದಾರಿ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಲಿಲ್ಲ.

ಅಧ್ಯಕ್ಷರು : ಕ್ಲೋಜ್ ಮಾಡಿರತಕ್ಕಂಥ ದಾರಿಯನ್ನು ಮತ್ತೆ ಯಾವಾಗ ಆರಂಭ ಮಾಡಲಾಗುತ್ತಿದೆ ಎನ್ನತಕ್ಕಂಥದ್ದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು. ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಎದ್ದು ನಿಂತುಕೊಂಡಿದ್ದಾರೆ. ಆದ್ದರಿಂದ ತಾವು ದಯಮಾಡಿ ಕುಳಿತುಕೊಳ್ಳಿ. ತಾವೇಕೆ ಈ ರೀತಿ ಮಾಡುತ್ತೀರಿ?

ಶ್ರೀ ಆರ್. ಅಶೋಕ್ : ಈ ಕಾಮಗಾರಿಯನ್ನು ಪೂರ್ಣವಾಗಿ ಮುಗಿಸಿ ಉದ್ಘಾಟನೆ ಯಾವಾಗ ಮಾಡುತ್ತೀರಿ?

ಶ್ರೀ ಹೆಚ್.ಡಿ. ರೇವಣ್ಣ : ಮನ್ಯ ಅಧ್ಯಕ್ಷರೆ, ಮೊದಲನೇ ಹಂತದ ಕಾಮಗಾರಿ ಮುಗಿದಿರುವಂಥದ್ದಕ್ಕೆ ಉದ್ಘಾಟನೆ ಮಾಡಲಾಗಿದೆ. ಮತ್ತೆ ಬಾಕಿ ಉಳಿದಿರತಕ್ಕಂಥ ಕೆಲಸ ಮುಗಿಸಿ ಅದನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು : ದಯಮಾಡಿ ಎಲ್ಲರೂ ಸಹಕರಿಸಬೇಕು. ಈಗ ಮುಂದಿನ ಪ್ರಶ್ನೆಗೆ ಹೋಗೋಣ. ಇನ್ನು ಬಹಳಷ್ಟು ಪ್ರಶ್ನೆಗಳು ನಮ್ಮ ಮುಂದಿವೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನಾನು ಕೇಳಿರತಕ್ಕಂಥ ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ. ಇದಕ್ಕೆ ನಾನು ಒಪ್ಪುವುದಿಲ್ಲ. ದಯವಿಟ್ಟು ತಾವು ದಾರಿ ಬಗ್ಗೆ ಮಾನ್ಯ ಸಚಿವರಿಂದ ಉತ್ತರ ಕೊಡಿರಬೇಕು. ಈ ದಾರಿ ಮುಚ್ಚಿರುವುದರಿಂದ ಜನರು ಸುತ್ತಿಕೊಂಡು ಹೋಗುವುದಕ್ಕೆ ಸಾಯುತ್ತಿದ್ದಾರೆ.

ಅಧ್ಯಕ್ಷರು : ಮಾನ್ಯ ಸಚಿವರು ಈಗಾಗಲೇ ಉತ್ತರ ನೀಡಿ ಇದಕ್ಕೆ ಇನ್ನು ಕಾಲಾವಕಾಶ ಕೇಳಿದ್ದಾರೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ರಸ್ತೆ ಬಗ್ಗೆ ಮಾನ್ಯ ಸಚಿವರು ಉತ್ತರ ಹೇಳಲಿಲ್ಲ.

ಅಧ್ಯಕ್ಷರು : ದಯಮಾಡಿ ತಾವು ಕುಳಿತುಕೊಳ್ಳಿ ನಮ್ಮ ಮುಂದೆ ಇನ್ನು ಅನೇಕ ಪ್ರಶ್ನೆಗಳಿವೆ. ತಾವು ಹೀಗೆ ಮಾಡಿದರೆ ಹೇಗೆ?

ಶ್ರೀ ಹೆಚ್.ಡಿ. ರೇವಣ್ಣ : ಪೂರ್ಣ ಕೆಲಸ ಆದ ತಕ್ಷಣವೇ ಸದರಿ ರಸ್ತೆಯ ಸಂಚಾರದ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಕಟ್ಟಡದ ಪೂರ್ಣ ಕಾಮಗಾರಿ ಇನ್ನು ಎರಡು ತಿಂಗಳಲ್ಲಿ ಮುಗಿಯುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾವೆಲ್ಲರೂ ಈ ಸದನದಲ್ಲಿ ಕುಳಿತುಕೊಂಡಿರತಕ್ಕಂತ ಈ ವಿಧಾನಸೌಧವನ್ನು ಮಾನ್ಯ ಕೆಂಗಲ್ ಹನುಮಂತಯ್ಯನವರು ನಿರ್ಮಾಣ ಮಾಡಿರತಕ್ಕಂಥದ್ದು. ಈ ಕಟ್ಟಡ ಕಟ್ಟುವುದಕ್ಕೆ ಆ ಸಂದರ್ಭದಲ್ಲಿ ಕೇವಲ 1 ಕೋಟಿ 40 ಲಕ್ಷ ರೂಪಾಯಿ ಖರ್ಚಾಗಿತ್ತು. ಈಗ ನಿರ್ಮಾಣ ಮಾಡುತ್ತಿರುವ ಕಟ್ಟಡಕ್ಕೆ 100 ಕೋಟಿ ರೂಪಾಯಿ ಮೇಲಾಗಿದೆ. ಇದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ವಿಧಾನಸೌಧ ಪಕ್ಕದಲ್ಲಿ ಈ ಸೌಧಕ್ಕೆ ಕಳಂಕ ಬರುವಂಥ ರೀತಿಯಲ್ಲಿ ಬೇರೆ ಒಂದು ಕೆಟ್ಟಡ ಬೇಕಾಗಿರಲಿಲ್ಲ. ಆದರೆ ನಾನು ಮಾನ್ಯ ಸಚಿವರಿಗೆ ಏನು ಸಲಹೆ ಮಾಡುತ್ತಿದ್ದೇನೆಂದರೆ, ವಿಧಾನಸೌಧವನ್ನು ನೋಡಿದ ತಕ್ಷಣ ಇದನ್ನು ಕೆಂಗಲ್ ಹನುಮಂತ್ಯನವರ ಸ್ಮಾರಕ, ಕೆಂಗಲ್ ಹನುಮಂತಯ್ಯನವರು ಶಿಲ್ಪಿ, ಕೆಂಗಲ್ ಹನುಮಂತಯ್ಯನವರ ಇತಿಹಾಸ, ಇದಕ್ಕೂಂದು ಶತಶತಮಾನಗಳ ಕಾಲ ಅವರ ಹೆಸರು ಉಳಿಯತಕ್ಕಂಥದ್ದು, ಪಕ್ಕದಲ್ಲಿ

ಒಂದು ಕಟ್ಟಡ ಬಂದಿರುವುದರಿಂದ ಎಲ್ಲೋ ಒಂದು ಕಡೆ ಅದು ಲೋಪವಾಗತ್ತದೆ. ಆದ್ದರಿಂದ ತಮ್ಮ ಮೂಲಕ ನಾನು ಮಾನ್ಯ ಸಚಿವರನ್ನು ಕೇಳುತ್ತೇನೆ. ಆ ಕಟ್ಟಡಕ್ಕೆ ಕೆಂಗಲ್ ಹನುಮಂತಯ್ಯ ಭವನ ಎಂದು ತಾವು ಹೆಸರನ್ನು ಇಡುತ್ತೀರಾ?

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಕೇಳಿದ್ದಾರೆ, ಇವತ್ತು ಆ ಪ್ರಶ್ನೆ ಇಲ್ಲ, ಪ್ರಶ್ನೆ ಬಂದಂಥ ಸಂದರ್ಭದಲ್ಲಿ ನಾನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಕೆಂಗಲ್ ಹನುಮಂತಯ್ಯ ಭವನ ಎಂದು ಅಷ್ಟೆ, ಹೊಸದು ಎನೂ ಇಲ್ಲ. ಕೆಂಗಲ್ ಹನುಮಂತಯ್ಯನವರಿಗೆ ಲೋಪವಾಗಬಾರದು.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ, ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಕೇಳುವುದೇನೆಂದರೆ, ಯಾವುದೋ ಒಂದು ಪ್ರಶ್ನೆ, ಈ ಪ್ರಶ್ನೆಗೆ ಈ ತರಹ ಲಂಬಿಸಿದರೆ ಹೇಗೆ?

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಇದೊಂದು ಸ್ಟೇಟ್ ಇಷ್ಯೂ ಇದನ್ನು ಚರ್ಚೆ ಮಾಡಿ ಏಕಾಏಕಿ ಎದ್ದು ಬಿಟ್ಟು ಉಪ ಪ್ರಶ್ನೆಯ ಮುಖಾಂತರ ಕೆಂಗಲ್ ಹನುಮಂತಯ್ಯ ಭವನ ಮಾಡಿ ಎಂದರೆ ಅವು ಹೇಗೆ ಡಿಸಿಷನ್ ತೆಗೆದುಕೊಳ್ಳುವುದಕ್ಕಾಗುತ್ತದೆ ಸ್ವಾಮಿ? ತಾವು ಮಂತ್ರಿಯಾಗಿದ್ದರೂ ಕೂಡ ಹಾಗೆ ಹೇಳುವುದಕ್ಕಾಗುತ್ತದೆಯೆ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈ ಸೌಧ ವಿಧಾನಸೌಧವೆಂದ ತಕ್ಷಣ ಕಣ್ಣಿಗೆ ಕಾಣತಕ್ಕಂಥದ್ದು ಕೆಂಗಲ್ ಹನುಮಂತಯ್ಯನವರದ್ದು, ಅದರ ಪಕ್ಕದಲ್ಲಿ ಇದೇ ತರಹ ವಿನ್ಯಾಸ ಇರುವುದರಿಂದ ಅದಕ್ಕಾಗಿ ನಾನು ತಮ್ಮ ಮೂಲಕವಾಗಿ ಒತ್ತಾಯವನ್ನು ಮಾಡುತ್ತಿದ್ದೇನೆ. ಇಡೀ ಸದನ ಒಕ್ಕೋರಲಿನಿಂದ ಒತ್ತಾಯವನ್ನು ಮಾಡುತ್ತದೆ. ಕೆಂಗಲ್ ಹನುಮಂತಯ್ಯ ಭವನ ಎಂದು ಇಡಬೇಕು.

ಅಧ್ಯಕ್ಷರು : ಮಾನ್ಯ ಸಚಿವರು ಪರಿಶೀಲನೆ ಮಾಡುತ್ತೇನೆಂದು ಹೇಳಿರುತ್ತಾರೆ.

ರಾಜ್ಯ ಹೆದ್ದಾರಿ ಅತಿಕ್ರಮ ಮಾಡಿ ಆಶ್ರಯ ಕಟ್ಟಡಗಳನ್ನು ನಿರ್ಮಾಣ ಮಾಡಿರುವುದು

37 (288): ಶ್ರೀ ಶ್ರೀರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಹೆದ್ದಾರಿಗಳಲ್ಲಿ ಲೋಕೋಪಯೋಗಿ ಇಲಾಖೆಯ ಸ್ಥಳವನ್ನು ಅತಿಕ್ರಮಿಸಿ ಆಶ್ರಯ ಕಟ್ಟಡಗಳನ್ನು ನಿರ್ಮಾಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಅಕ್ರಮ ಕಟ್ಟಡಗಳನನು ಕಿಡವಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಸಚಿವರು)

ಅ) ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರ ಉತ್ತರದಲ್ಲಿ ಪ್ರಿಂಟ್ ಮಿಸ್ಟೇಕ್ ಆಗಿ ಹಾಗೆ ಕಳುಹಿಸಿದ್ದಾರೆ ಅಧಿಕಾರಿಗಳು. ನಾನು ಅತ್ರಿಕ್ರಮ ಕಟ್ಟಡಗಳನ್ನು ನಿರ್ಮಾಣ ಮಾಡಲಾಗಿದೆಯೇ ಎಂದು ಪ್ರಶ್ನೆ ಕೇಳಿದರೆ, ಆಶ್ರಯ ಎಂದು ಅವರು ಉತ್ತರವನ್ನು ಕೊಟ್ಟಿದ್ದಾರೆ. ಅದು ಪ್ರಿಂಟ್ ಮಿಸ್ಟೇಕ್ ಆಗಿದೆ, ಬಹುಶಃ ಮೇಲ್ಗಡೆ ಕರೆಕ್ಷಾಗಿದೆ, ಕೆಳಗಡೆ ಪ್ರಿಂಟ್ ಮಾಡುವಾಗ